3) ವಿಷಯ : ಕರ್ನಾಟಕ ಗೃಹ ಮಂಡಳಿ ವತಿಯಿಂದ ಹಾಸನ ನಗರದಲ್ಲಿ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಕುರಿತು.

* * * * * *

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಕರ್ನಾಟಕ ಗೃಹ ಮಂಡಳಿ ವತಿಯಿಂದ ಹಾಸನ ನಗರದಲ್ಲಿ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಕುರಿತು ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕಸಬಾ ಹೋಬಳಿಯ ಈ ಕೆಳಕಂಡ ಗ್ರಾಮಗಳಲ್ಲಿ ಆ ಗ್ರಾಮಗಳ ಮುಂದೆ ಕಾಣಿಸಿದ ವಿಸ್ತೀರ್ಣದ ಜಮೀನುಗಳನ್ನು ಕರ್ನಾಟಕ ಗೃಹ ಮಂಡಳಿಯು ವಸತಿ ಯೋಜನೆಗಾಗಿ ಭೂ-ಸ್ವಾಧೀನಪಡಿಸಿಕೊಳ್ಳಲು ದಿನಾಂಕ: 21-6-2007 ರಂದು ಭೂಸ್ವಾಧೀನ ಕಾಯ್ದೆ ಕಲಂ 4(1)ರ - ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:7-5-2007 ರಂದು ಪ್ರಕಟಗೊಂಡಿರುತ್ತದೆ.

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಅಧಿಸೂಚನೆ ಹೊರಡಿಸಿದ ಒಟ್ಟು ವಿಸ್ತೀರ್ಣ.
1	ಚಿಕ್ಕಕೊಂಡಗೋಳ	397 ಎಕರೆ 8.1/2 ಗುಂಟೆ
2	ಮಾವಿನಹಳ್ಳಿ	124 ಎಕರೆ 20 ಗುಂಟೆ
3	ಸತ್ಯಮಂಗಲ	76 ಎಕರೆ 18.1/2 ಗುಂಟೆ
ಒಟ್ಟು ವಿಸ್ತೀರ್ಣ		**598 ಎಕರೆ 07 ಗುಂಟೆ**

ಈ ಅಧಿಸೂಚನೆಯ ನಂತರ, ಒಟ್ಟು 540 ರೈತರು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಆ ಬಗ್ಗೆ ಗ್ರಾಮಾವಾರು ವಿವರ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಆಕ್ಷೇಪಣೆ ಸಲ್ಲಿಸಿದ ರೈತರ ಸಂಖ್ಯೆ
1	ಚಿಕ್ಕಕೊಂಡಗೋಳ	442
2	ಮಾವಿನಹಳ್ಳಿ	42
3	ಸತ್ಯಮಂಗಲ	56
ಒಟ್ಟು		**540**

ಹೀಗೆ, ಸ್ವೀಕರಿಸಿದ ಆಕ್ಷೇಪಣೆಗಳ ಬಗ್ಗೆ, ದಿನಾಂಕ: 6–12–2008 ರಿಂದ 7–10–2009 ರವರೆಗೆ, ಹಾಸನ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ ಭೂಸ್ವಾಧೀನ ಕಾಯ್ದೆಯ ಕಲಂ 5(1)ರನ್ವಯ, ಪ್ರತಿಯೊಬ್ಬರಿಗೂ ನೋಟೀಸ್ ನೀಡಿ, ವಿಶೇಷ ಭೂಸ್ವಾಧೀನಾಧಿಕಾರಿಗಳು ವಿಚಾರಣೆ ಮಾಡಿರುತ್ತಾರೆ.

ವಿಚಾರಣೆ ವೇಳೆಯಲ್ಲಿ, ಆಕ್ಷೇಪಣೆಗಳ ಬಗ್ಗೆ ಪೂರ್ಣ ವಿವರಗಳನ್ನು ಪಡೆದುಕೊಂಡ ನಂತರ, ಈ ಭೂಮಿಯ ಸ್ಥಳ ಪರಿಶೀಲನೆ ನಡೆಸಲು ದಿನಾಂಕ: 9–12–2009 ರಂದು ಅಧಿಕಾರಿಗಳು ಭೇಟಿಕೊಟ್ಟ ಸಂದರ್ಭದಲ್ಲಿ ದಾಸರಕೊಪ್ಪಲು ಗ್ರಾಮದಲ್ಲಿ ಗುಂಪೊಂದು, ಅಧಿಕಾರಿಗಳನ್ನು ತಡೆಗಟ್ಟಿ, ಅಧಿಕಾರಿಗಳಿದ್ದ ವಾಹನಗಳನ್ನು ಜಖಂಗೊಳಿಸಿತಲ್ಲದೇ, ಹಾಜರಿದ್ದ ಅಧಿಕಾರಿ ಗಳಿಗೆ ಬೆದರಿಕೆ ಹಾಕಿ, ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳುವುದಿಲ್ಲ ವೆಂಬಂತೆ ಅವರಿಂದ ಒತ್ತಾಯ ಪೂರ್ವಕವಾಗಿ ಒಂದು ಪತ್ರವನ್ನು ಸಹ ಬರೆಸಿಕೊಂಡಿರುತ್ತಾರೆ. ಈ ಬಗ್ಗೆ, ಅದೇ ದಿನ ಹಾಸನ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ನಂತರ, ದಾಖಲಾತಿಗಳನ್ನು ಪರಿಶೀಲಿಸಿ ಅದರಂತೆ, ಹಾಸನದಲ್ಲಿ ವಸತಿ ನಿವೇಶನಗಳನ್ನು ಕೋರಿ, 1400ಕ್ಕೂ ಹೆಚ್ಚಿನ ಅರ್ಜಿದಾರರು ಕರ್ನಾಟಕ ಗೃಹ ಮಂಡಳಿಯಲ್ಲಿ ನೊಂದಾಯಿಸಿರುವ ಅರ್ಜಿಗಳನ್ನು ಪರಿಗಣಿಸಿ, ದಿನಾಂಕ: 18–1–2010 ರಂದು ಭೂಸ್ವಾಧೀನ ಕಾಯ್ದೆಯ ಕಲಂ 6(1)ರನ್ವಯ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚ ನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 4–2–2010 ರಂದು ಪ್ರಕಟಗೊಂಡಿದೆ.

ಆದರೆ, ಪ್ರಸ್ತಾವಿತ ಜಮೀನುಗಳು, ಫಲವತ್ತಾದ ಭೂಮಿಯಾದ್ದರಿಂದ ಅವುಗಳನ್ನು ವಸತಿ ನಿವೇಶನಗಳಿಗಾಗಿ ಭೂ ಸ್ವಾಧೀನ ಮಾಡುವುದು ಬೇಡವೆಂದು ರೈತರು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ರೈತರುಗಳು ಈ ಜಮೀನುಗಳನ್ನು ಮುಂದೆ ಕನಿಷ್ಠ ಐದು ವರ್ಷಗಳವರೆಗೆ ಕೃಷಿ ಭೂಮಿಯಾಗಿಯೆ ಮುಂದುವರಿಸಿಕೊಂಡು ಹೋಗಬೇಕೆಂದು ಮತ್ತು ಯಾವುದೇ ರೀತಿಯಲ್ಲಿ ಇವುಗಳನ್ನು ಮಧ್ಯವರ್ತಿಗಳಿಗೆ ನೀಡಬಾರದೆಂಬ ಷರತ್ತನ್ನು ವಿಧಿಸಿ ಭೂ ಸ್ವಾಧೀನದಿಂದ ಕೈಬಿಡುವ ಬಗ್ಗೆ ಪರಿಶೀಲಿಸಿ ಅದರಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ನಿಯಮ 73ರ ಅಡಿಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಹಾಸನ ನಗರದಲ್ಲಿ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡುವ ಉದ್ದೇಶದಿಂದ ವಸತಿ ನಿವೇಶನಕ್ಕೆ ಬೇಡಿಕೆ ಆಧಾರದ ಮೇಲೆ ಸಮೀಕ್ಷೆ ಮಾಡಿ 4(1) ಹಾಗೂ 6(1) ಅಧಿಸೂಚನೆಯನ್ನು ಹೊರಡಿಸಿದ್ದು, ಈ ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈ ಬಿಡುವ ಬಗ್ಗೆ ಮುಖ್ಯಮಂತ್ರಿಗಳಿಗೆ ದಿನಾಂಕ: 09.01.2009 ರಂದು ಮಂಗಳ ನಗರ ಬಡಾವಣೆ ಉದ್ದೇಶಿತ ಹಾಗೂ ಹಾಸನ ಕ್ಷೇತ್ರ ಅಭಿವೃದ್ಧಿ ಸಂಘ ಹಾಗೂ ಹಾಸನ ಜಿಲ್ಲಾ ಭಾರತೀಯ ಜನತಾ ಪಾರ್ಟಿಯ ಮುಖಂಡರು ದಿನಾಂಕ: 01.01.2010 ರಂದು ಮನವಿಯನ್ನು ನೀಡಿದ್ದು, ಈ ಮನವಿಯನ್ನು ಮುಖ್ಯಮಂತ್ರಿ, ವಸತಿ ಇಲಾಖೆ, ಗೃಹ ಮಂಡಳಿ ಇಲಾಖೆಯ ಸೂಚನೆ ನೀಡಿ, ನಂತರ ಗೃಹ ಮಂಡಳಿಯ ಆಯುಕ್ತರು ದಿನಾಂಕ: 23.02.2010 ರಂದು ಈ ಮೇಲ್ಕಂಡ ಅರ್ಜಿಯನ್ನು ಪರಿಶೀಲಿಸಿ ಈ ಹಂತದಲ್ಲಿ ನಿಯಮಾನುಸಾರ ಜಮೀನನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಲು ಸಾಧ್ಯವಿಲ್ಲವೆಂಬ ವಿಚಾರವನ್ನು ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆಗೆ ತಿಳಿಸಿರುತ್ತಾರೆ. ಈ ಸದನದಲ್ಲಿ ವಸತಿ ಸಚಿವರ ಪರವಾಗಿ ಗ್ರಾಮೀಣಾಭಿವೃದ್ಧಿ ಸಚಿವರು ಒಂದು ಹೇಳಿಕೆಯನ್ನು ನೀಡಿರುತ್ತಾರೆ. ಕೆಲವು ರಾಜಕೀಯ ಮುಖಂಡರುಗಳು ಸದರಿ ಭಾಗದಲ್ಲಿ ಸಾರ್ವಜನಿಕರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಈ ವಿಚಾರವನ್ನು ಮಾನ್ಯ ವಸತಿ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಮಾನ್ಯ ಸಚಿವರು reply ಕೊಟ್ಟಿದ್ದಾರೆ, ಇದರಲ್ಲಿ condition ಹಾಕಿದ್ದಾರೆ, ಮತ್ತೆ ಈ condition ಅನ್ನು ತೆಗೆಯುವುದು ಇದೆಯೋ, ಇಲ್ಲವೊ, ಏಕೆಂದರೆ ತಾವೇ last time

ಹೇಳಿದ್ದೀರಿ, ಮತ್ತೆ condition ಹಾಕಿ ಮಧ್ಯವರ್ತಿಗಳಿಗೆ ಅನುಕೂಲವಾಗ ಬಾರದು. ಅದರ ಜೊತೆಗೆ ಸುಮಾರು 5,000 ನಿವೇಶನದಾರರು, ಇವತ್ತು ಅಲ್ಲಿ ಕಾಯುತ್ತಿದ್ದಾರೆ. ಇದನ್ನು ಯಾವುದೋ ದುರುದ್ದೇಶದಿಂದ ಮಧ್ಯವರ್ತಿ ಗಳಿಗೆ ಅನುಕೂಲವಾಗುವಂತೆ ಮಾಡಬೇಡಿ. ಯಾರು ನಿವೇಶನದಾರರು ಇದ್ದಾರೆ, ಅವರಿಗೆ ಅನುಕೂಲವಾಗುವ ಹಾಗೆ ನಿವೇಶನ ಮಾಡಿಕೊಡಿ, ಕರ್ನಾಟಕ ಗೃಹ ಮಂಡಳಿ ಮತ್ತು ರೈತರಿಗೂ ಅನುಕೂಲವಾಗಬೇಕು. ರೈತರೂ ಸಹ 40 X 60 ಅಡಿ ಅಳತೆಯ ನಿವೇಶನಕ್ಕೆ ಒಪ್ಪಿಕೊಂಡಿದ್ದಾರೆ. ತಾವು ಆ ರೀತಿ ಮಾಡಬೇಕೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಬಗ್ಗೆ last time ಹೇಳಿದ್ದರು. ತಮಗೆ ಮನವಿಯನ್ನು ಮಾಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ವಿಷಯ ಏನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಮಾನ್ಯ ವಸತಿ ಸಚಿವರ ಗಮನಕ್ಕೆ ತರುತ್ತೇನೆ. ಅದರ ಬಗ್ಗೆ ಸರಿಯಾದ ನಿರ್ಣಯವನ್ನು ಕೈಗೊಳ್ಳುತ್ತೇವೆ.

7. ಅರ್ಧಗಂಟೆ ಕಾಲಾವಧಿ ಚರ್ಚೆ :

ವಿಷಯ : ನೆಮ್ಮದಿ ಕೇಂದ್ರಗಳ ಬಗ್ಗೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ನೆಮ್ಮದಿ ಕೇಂದ್ರಗಳ ಬಗ್ಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಇವತ್ತು ನೆಮ್ಮದಿ ಕೇಂದ್ರಗಳ ಮೂಲಕ ಎಲ್ಲಾ ರೀತಿಯ certificate ಗಳನ್ನು ಕೊಡಬೇಕಾಗುತ್ತದೆ. ಅದರಲ್ಲಿ ರೈತರಿಗೆ ಸಂಬಂಧಪಟ್ಟ ಹಾಗೆ ಯಾವ ಬೆಳೆಗಳನ್ನು ಬೆಳೆದಿದ್ದೇವೆಂಬುದನ್ನು entry ಮಾಡಬೇಕಾಗುತ್ತದೆ. ಬ್ಯಾಂಕ್‌ನಿಂದ ಸಾಲವನ್ನು ತೆಗೆಯಬೇಕೆಂದರೆ ಆ RTC ಅನ್ನು ಕೊಡಬೇಕಾಗುತ್ತದೆ. ಅದರ ಜೊತೆಗೆ ಸರಿಯಾಗಿ ಮಾಹಿತಿ ಯನ್ನು feed ಮಾಡುವಂಥ ಅವಕಾಶ ಕೂಡ ಇಲ್ಲ. ಅದರ ಜೊತೆಗೆ Income certificate ಅನ್ನು ಕೂಡ ಅದರ ಮುಖಾಂತರವೇ ಕೊಡುತ್ತಾರೆ.